ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡು, ಇದನ್ನು ಕ್ಲೋಸ್ ಮಾಡಿದ್ದೇನೆ. ಈಗ ಮಾನ್ಯ ಕೃಷ್ಣಪ್ಪನವರು, ತಮ್ಮ ಗಮನ ಸೆಳೆಯುವ ಸೂಚನೆಯನ್ನು ರೈಸ್ ಮಾಡಿ.

ಶ್ರೀ ಬಿ.ರಮಾನಾಥ ರೈ:- ಈಗಾಗಲೇ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಮಂತ್ರಿಗಳು ಇನ್ನೂ ಉತ್ತರ ಕೊಡಲಿಲ್ಲ. ಅವರು ಉತ್ತರ ಕೊಡುವ ತನಕದಲ್ಲಿದ್ದಾರೆ.

ಅಧ್ಯಕ್ಷರು:- ಪ್ರತಿಯೊಬ್ಬರೂ ಕೂಡ ಭಾಷಣ ಮಾಡಿಕೊಂಡು ಹೋಗುತ್ತಿದ್ದರೆ ಆಗುತ್ತದೆಯೇ? ನೀವು ಬರೀ ಭಾಷಣ ಮಾಡುತ್ತಿದ್ದೀರಿ, ವಿವರಣೆ ಕೇಳಿದ್ದೀರಾ? ಅದು ವಿವರಣೆ ಕೇಳುವ ವಿಧಾನವೇ? ದಯಮಾಡಿ, ಎಲ್ಲರೂ ನಾಳೆಯಿಂದ ರೂಲ್ಸ್ ಪುಸ್ತಕವನ್ನು ತೆಗೆದುಕೊಂಡು ಒಂದು ಗಂಟೆ ಕಾಲ ಅಭ್ಯಾಸ ಮಾಡಿಕೊಂಡು ಬನ್ನಿ. ಸದನ ನಡೆಸುವುದು ಸುಲಭ ಆಗುತ್ತದೆ. ಇಲ್ಲದೇ ಹೋದರೆ ಇದು ಬಜಾರ್ ಆಗುತ್ತದೆ, ಸದನ ಆಗುವುದಿಲ್ಲ.

(2) ಕೊಳ್ಳೆಗಾಲ ತಾಲ್ಲೂಕು ಕುಂತೂರು ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯು ಮುಚ್ಚಿರುವುದರಿಂದ, ಕಬ್ಬು ಬೆಳೆಗಾರರಿಗೆ ಉಂಟಾಗಿರುವ ತೊಂದರೆ.

ಶ್ರೀ ಎಸ್.ಕೃಷ್ಣಪ್ಪ (ಬನ್ನೂರು):- ಮಾನ್ಯ ಅಧ್ಯಕ್ಷರೇ, ಕೊಳ್ಳೆಗಾಲ ತಾಲ್ಲೂಕು, ಕುಂತೂರು ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯನ್ನು ಇನ್ನೂ ಪ್ರಾರಂಭ ಮಾಡದೇ ಇರುವ ಪ್ರಯುಕ್ತ ಆ ಭಾಗದ ರೈತರಿಗೆ ಬಹಳ ಅನಾನುಕೂಲವಾಗಿ ತೊಂದರೆಯಲ್ಲಿದ್ದಾರೆ. ಅವರ ಬಗ್ಗೆ ನಾನು ಪರಿಪೂರ್ಣವಾದ ಮಾಹಿತಿಯನ್ನು ಮತ್ತು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಇಲ್ಲಿಯವರೆಗೆ ಆಗಿರತಕ್ಕ ತೊಂದರೆಯನ್ನು ತಮ್ಮ ಮುಂದೆ ನಿವೇದನೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಸಕ್ಕರೆ ಮಂತ್ರಿಗಳು ಮೊಟ್ಟಮೊದಲು ನಮಗೆ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ, ತಂತ್ರಜ್ಞಾನ ಪರಿಸರ ರಾಜ್ಯ ಸಚಿವರು):- ಮಾನ್ಯ ಅಧ್ಯಕ್ಷರೇ, ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆಯ ದಿನವಹಿ ಕಬ್ಬು ಸುರಿಸುವ ಸಾಮರ್ಥ್ಯ 2500ಮೆ.ಟನ್‌ಗಳಾಗಿರುತ್ತದೆ. 1994-95ನೇ ಹಂಗಾಮಿನಲ್ಲಿ ಕಾರ್ಖಾನೆಯು 4,02,415 ಮೆ.ಟನ್ ಕಬ್ಬನ್ನು ಸುರಿಸಿ 33,968 ಮೆ.ಟನ್ ಸಕ್ಕರೆಯನ್ನು ಉತ್ಪಾದಿಸಿರುತ್ತದೆ. ಕಾರ್ಖಾನೆಯು ಸದರಿ ಹಂಗಾಮನ್ನು ದಿನಾಂಕ 10-06-1994 ರಂದು ಪ್ರಾರಂಭಿಸಿ ದಿನಾಂಕ 10-04-1995 ಕ್ಕೆ ನಿಲ್ಲಿಸಿರುತ್ತದೆ. ಸದರಿ ಹಂಗಾಮಿನಲ್ಲಿ ಕಾರ್ಖಾನೆಗೆ ಸರಬರಾಜು ಮಾಡಿದ ಕಬ್ಬಿಗೆ ಟನ್ ಒಂದಕ್ಕೆ ರೂ. 675-00 [illegible] ಪಾವತಿಸಿರುತ್ತದೆ.

1995-96ನೇ ಸಾಲಿಗೆ ಸಂಬಂಧಿಸಿದಂತೆ ಕಾರ್ಖಾನೆಯು ಇದನ್ನು ಕಾರ್ಯಾರಂಭ ಮಾಡಿರುವುದಿಲ್ಲ. [illegible] ಅಂತ್ಯದ ವೇಳೆಗೆ ಪ್ರಾರಂಭಿಸುವುದಾಗಿ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರಿಗೆ ಸದರಿ ಕಾರ್ಖಾನೆಯ ವ್ಯವಸ್ಥಾಪಕರು ಈ ಹಿಂದೆ ಮಾಹಿತಿ ನೀಡಿದ್ದರು. ಆದರೆ ಅದರಂತೆ ಕಾರ್ಯಾರಂಭ ಮಾಡಿರುವುದಿಲ್ಲ. 1995-96ನೇ ಸಾಲಿಗೆ ಕಬ್ಬಿನ ಬೆಳೆ ಪಾವತಿಸುವ ಬಗ್ಗೆ ರೈತರು ಹಾಗೂ ಕಾರ್ಖಾನೆಯ ವ್ಯವಸ್ಥಾಪಕರ ನಡುವೆ ಒಡಂಬಡಿಕೆ ಆಗದಿರುವ ಕಾರಣ ಕಾರ್ಖಾನೆಯನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ. 1995-96ನೇ ಸಾಲಿಗೆ ದಿನಾಂಕ 16-9-1995ರಿಂದ ಕಾರ್ಯರಂಭ ಮಾಡುವುದಾಗಿ ಕಾರ್ಖಾನೆಯ ವ್ಯವಸ್ಥಾಪಕರು ತಿಳಿಸಿದ್ದಾರೆ.

ಶ್ರೀ ಎಸ್.ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೇ, ಈ ಮಹದೇಶ್ವರ ಸಕ್ಕರೆ ಕಾರ್ಖಾನೆ

ಪ್ರಾರಂಭವಾದದ್ದು ಸಹಕಾರ ತತ್ತ್ವದ ಮೇಲೆ. ಆಭಾಗದ ಷೇರ್‌ಹೋಲ್ಡರ್‌ಗಳ ಷೇರಿನ ಮೇಲೆ ಪ್ರಾರಂಭವಾಯಿತು. ಆಗಲೂ ಕೂಡ ಆ ಭಾಗದ ರೈತರು, ಈ ಕಾರ್ಖಾನೆ ಪ್ರಾರಂಭವಾಗಿ ನಡೆಯುವಂಥ ಸಂದರ್ಭದಲ್ಲಿ ಲಕ್ಷಾಂತರ ರೂಪಾಯಿಗಳ ಷೇರುಗಳನ್ನು ಕೊಟ್ಟಿದ್ದರೂ ಕೂಡ ಆ ಭಾಗದಲ್ಲಿ ಬೆಳೆದಂಥ ಕಬ್ಬಿನಲ್ಲೇ 85 ಭಾಗ ಸಹಕಾರ ಸಕ್ಕರೆ ಕಾರ್ಖಾನೆಗೆ ಕೊಡಬೇಕೆಂದು ಮಾಡಿದರು. ಆದರೂ ಕೂಡ ಆ ಭಾಗದ ಜನ, ಒಪ್ಪಿಗೆ ಕೊಡದೇ ಇದ್ದರೂ ಕೂಡ, ಬಲಾತ್ಕಾರವಾಗಿ ಕಬ್ಬನ್ನು ಪಡೆದು, ಗಾಣ, ಎತ್ತಿನ ಗಾಣ ಸೀಜ್ ಮಾಡಿ, ಅಲ್ಲಿನ ರೈತರ ಮೇಲೆ ಎಷ್ಟೊ ಕೇಸುಗಳನ್ನು ಹಾಕಿ, ಆ ಸಕ್ಕರೆ ಕಾರ್ಖಾನೆಯನ್ನು ಶುರು ಮಾಡಿದರು. ಅನಂತರ, ತೆಗೆದುಕೊಂಡ ಕಬ್ಬಿಗೂ ಕೂಡ ದುಡ್ಡು ಕೊಡದೇ, ಬಹಳ ಲಾಸ್ ಆಗಿದೆಯೆಂದು ಸರ್ಕಾರ , ಅದನ್ನು ಲಿಕ್ವಿಡೇಟ್ ಮಾಡಿದರು. ಸಹಕಾರ ತತ್ವದಲ್ಲಿದ್ದಂಥ ಒಂದು ಸಕ್ಕರೆ ಕಾರ್ಖಾನೆಯನ್ನು ಲಿಕ್ವಿಡೇಟ್ ಮಾಡಿ, ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯನ್ನು, ಬರೀ ಮಹದೇಶ್ವರ ಸಕ್ಕರೆ ಕಾರ್ಖಾನೆಗೆ ಖಾಸಗಿಯವರಿಗೆ ವರ್ಗಾಮಾಡಿದರು. ಈ ರೀತಿ ಖಾಸಗಿಯವರಿಗೆ ವರ್ಗ ಮಾಡುವಾಗ, ಯಾವ ವಿಧವಾದ ಕಂಡೀಷನ್ ಸರ್ಕಾರ ಹಾಕಲಿಲ್ಲ. ತಮಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಚಾಮುಂಡಿ ಸಕ್ಕರೆ ಕಾರ್ಖಾನೆ ಹಿಂದೆ ಪ್ರಾರಂಭವಾದುದು ಸಹಕಾರಿ ತತ್ವದ ಪ್ರಕಾರ. ಅದನ್ನು ಖಾಸಗಿಯವರಿಗೆ ಕೊಡುವಾಗ, ಆ ಭಾಗದ ಷೇರುದಾರರೆಲ್ಲರನ್ನೂ, ಅದಕ್ಕೆ ಷೇರುದಾರರನ್ನಾಗಿ ಮಾಡಿದರು.

ಅಧ್ಯಕ್ಷರು:- ನಾನು ಗಮನಿಸುತ್ತಾ ಇದ್ದೆ. ನಿಮ್ಮ ಆತಂಕ ಏನೆಂದರೆ, ಕಾರ್ಖಾನೆ ಈಗ ಕೆಲಸ ಮಾಡುತ್ತಾ ಇಲ್ಲ, ಸ್ಥಗಿತವಾಗಿದೆ, ಕಬ್ಬು ಬೆಳೆಗಾರರಿಗೆ ತೊಂದರೆಯಾಗಿದೆ, ಎಂದು. ಸರ್ಕಾರದವರು ಉತ್ತರದಲ್ಲಿ 16-9-95ರಿಂದ ಕಾರ್ಖಾನೆ ಕಾರ್ಯಾರಂಭ ಮಾಡುತ್ತದೆಂದು ಹೇಳಿದ್ದಾರೆ. ನೀವು ಹಿಂದಿನ ಇತಿಹಾಸ ಏನು ಹೇಳುತ್ತಿದ್ದೀರಿ, ಅದು ಇಲ್ಲಿ ಪ್ರಸ್ತಾಪ ಮಾಡಿರತಕ್ಕ ವಿಷಯದ ವ್ಯಾಪ್ತಿಯೊಳಗೆ ಬರುವುದಿಲ್ಲ. ನಿಮ್ಮ ಆತಂಕ ಏನೆಂದರೆ, ಮತ್ತು ತಕ್ಷಣದ ಸಮಸ್ಯೆ ಏನೆಂದರೆ, ಆ ಪ್ರದೇಶದ ಕಬ್ಬು ಬೆಳೆಗಾರರಿಗೆ ಕಾರ್ಖಾನೆ ಮುಚ್ಚಿರುವುದರಿಂದ, ತೊಂದರೆಯಾಗಿದೆ ಎಂದು. ಅದಕ್ಕೆ ಕಾರಣವನ್ನು ವಿವರಿಸಿ, ಕಾರ್ಖಾನೆಯನ್ನು 16-9-95ರಿಂದ ಪುನಃ ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್.ಕೃಷ್ಣಪ್ಪ:- ಹಿಂದೆ ಅದೇ ಕಾರ್ಖಾನೆಯಲ್ಲಿ ಹಣ ಕೊಟ್ಟಿರಲಿಲ್ಲ. ನಾನು ಪ್ರಶ್ನೆಯನ್ನು ಕೇಳಿದಾಗ, 7-4-95ರಲ್ಲಿ ಆ ಭಾಗದ ರೈತರು ಕಬ್ಬನ್ನು ಹೊರಗಡೆ ಕೊಡಲು ಅವಕಾಶ ಕೊಡುತ್ತೀರಾ ಎಂದು ಕೇಳಿದ್ದಕ್ಕೆ, ಕೊಡುತ್ತೇವೆಂದು ಹೇಳಿದ್ದರು. ಮತ್ತೆ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆಂದೂ ಹೇಳಿದ್ದರು, ಆದರೆ ಪ್ರಾರಂಭ ಮಾಡಲಿಲ್ಲ, ಅದಾದಮೇಲೆ, ನಾನು ಇನ್ನೊಂದು ಪ್ರಶ್ನೆಯನ್ನು ಕೇಳಿದೆ, ಮಾನ್ಯ ಸಚಿವರು 11-8-95ರಲ್ಲಿ ಕೊಳ್ಳೆಗಾಲ ಮಹದೇಶ್ವರ ಸಕ್ಕರೆ ಕಾಖಾನೆಯು ಪ್ರಸ್ತುತ ತಿಂಗಳ ಕೊನೆಯ ವಾರದಲ್ಲಿ ಕಬ್ಬು ಅರೆಯುವ ಕೆಲಸವನ್ನು ಪ್ರಾರಂಭಿಸುವುದು ಎಂದು ಆಶ್ವಾಸನೆ ಕೊಟ್ಟರು. ಮತ್ತೆ ಸಕ್ಕರೆ ಮಂತ್ರಿಗಳ ಹತ್ತಿರ, ಆ ಕಾರ್ಖಾನೆಯ ಮಾಲೀಕರನ್ನು ಕರೆದು ಮಾತನಾಡಿದಾಗ ಕೇವಲ 560 ರೂಪಾಯಿಕೊಡುತ್ತೇವೆ ಎನ್ನತಕ್ಕ ಮಾತನ್ನು ಕೂಡ ಹೇಳಿದರು. ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿದಾಗ, ಕೇವಲ 560 ರೂಪಾಯಿ ಕೊಡುತ್ತೇವೆಂಬ ಮಾತನ್ನು ಹೇಳಿದರು, ಕಳೆದ ಸಾರಿ 675 ರೂಪಾಯಿ ಕೊಟ್ಟಿರತಕ್ಕ ಸಕ್ಕರೆ ಕಾರ್ಖಾನೆ, ಈಗ ಈ ರೀತಿ ಹೇಳುತ್ತಾರೆ. ಆ ಭಾಗದ ರೈತರು 15-16 ತಿಂಗಳಿಂದ ಕಬ್ಬನ್ನು ಬಿಟ್ಟದ್ದಾರೆ, ಕಬ್ಬನ್ನು ಇವರು

ಒಪ್ಪಿಕೊಂಡಿದ್ದಾರೆ. ಮತ್ತೆ ಕಳೆದ ಸಾರಿ ತೆಗೆದುಕೊಂಡ ಕಬ್ಬಿಗೆ ಇವತ್ತಿನವರೆಗೂ ಹಣ ಕೊಟ್ಟಿಲ್ಲ, ವರ್ಷಾನುಗಟ್ಟಲೆ ಹಣ ಕೊಡದೇ ಮತ್ತು ಅವರಿಗೇ ಒಪ್ಪಿಗೆ ಕೊಟ್ಟಿರತಕ್ಕ ಕಬ್ಬನ್ನೂ ತೆಗೆದುಕೊಳ್ಳಲು ಪ್ರಾರಂಭ ಮಾಡದೇ ಇರುವುದರಿಂದ ರೈತರು ಕಂಗಾಲಾಗಿದ್ದಾರೆ. ದಯಮಾಡಿ, ಸಕ್ಕರೆ ಕಾರ್ಖಾನೆಯ ಮಾಲೀಕರ ದೌರ್ಜನ್ಯಕ್ಕೆ ಒಪ್ಪದೇ, ತಕ್ಷಣ ಪ್ರಾರಂಭ ಮಾಡಿ,ಅಲ್ಲಿಯ ರೈತರ ಕಷ್ಟಕ್ಕೆ, ಭಾಗಿಯಾಗಬೇಕೆಂದು ತಮ್ಮ ಮುಖಾಂತರ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯಸದಸ್ಯರು ಹೇಳಿದಂಥ ವಿಚಾರದ ಬಗ್ಗೆ ಈಗಾಗಲೇ ಸದಸ್ಯರನ್ನು ಮತ್ತು ಈ ಕಾರ್ಖಾನೆಯ ವ್ಯವಸ್ಥಾಪಕರನ್ನು ಕರೆಸಿ ಮಾತನಾಡಿದ್ದೇನೆ. ಕೇವಲ 15 ದಿವಸದೊಳಗೆ ಈ ಕಾರ್ಖಾನೆಯನ್ನು ಪ್ರಾರಂಭ ಮಾಡುವಂಥ ಪತ್ರವನ್ನೂ ಕೂಡ ಇಲಾಖೆಯ ಅಧಿಕಾರಿಗಳು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಇನ್ನೂ ಎರಡು ಮುಖ್ಯವಾದ ಅಭಿಪ್ರಾಯಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಲಿಕ್ವಿಡೇಷನ್ ಮಾಡಿದರು ಎಂದು ಹೇಳಿದರು. 1986 ಮಾರ್ಚ್‌ನಲ್ಲಿ ಹಿಂದಿನ ಸರ್ಕಾರ ಲಿಕ್ವಿಡೇಷನ್ ಮಾಡಿ, ಕೋ-ಆಪರೇಟಿವ್ ಮೇಲಿರತಕ್ಕ ಸಕ್ಕರೆ ಕಾರ್ಖಾನೆಯನ್ನು ಮಾರಾಟ ಮಾಡಿದ್ದಾರೆ. ಈಗ ಏನಾಗಿದೆ ಎಂದರೆ, ಈ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಕೆಲವು ಟೆಕ್ನಿಕಲ್ ಬರುತ್ತದೆ, ಮಿಷನರಿ ಸರಿಯಿಲ್ಲವೆಂದು ಕೆಲವು ಸಮಯ ತೆಗೆದುಕೊಂಡಿದ್ದರು. ಏನೇ ಇದ್ದರೂ ಕೂಡ ರೈತರಿಗೆ ಬರತಕ್ಕ ಬಾಕಿ ಇದ್ದರೆ, ಪುನಃ ಒಂದು ಸಭೆಯನ್ನು ಕರೆದು, ಸಂಬಂಧಪಟ್ಟ ಅಧಿಕಾರಿಗಳನ್ನು, ಆ ಶಾಸಕರನ್ನೂ ಕರೆಯಿಸಿ, ರೈತರಿಗೆ ಏನಾದರೂ ಕೊಡುವುದಿದ್ದರೆ, ಹಿಂದೆ ಏನಾದರೂ ಕಂಡಿಷನ್ ಹಾಕದೇ ಇದ್ದರೆ, ಅದರ ಬಗ್ಗೆ ಪುನಃ ಪರಿಶೀಲನೆ ಮಾಡಿ, ತಮ್ಮ ಗಮನಕ್ಕೆ ತರುತ್ತೇನೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ಕೇವಲ 10-15 ದಿವಸದಲ್ಲಿ ಆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಾಗಿ ಈಗಾಗಲೇ ಆಶ್ವಾಸನೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್.ನಾಗಪ್ಪ :- ಕಳೆದ ತಿಂಗಳು ನಮ್ಮ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಅವರನ್ನೂ ಕರೆಸಿ ಮಾತನಾಡಿದಾಗ, ಈ ತಿಂಗಳು 7ನೇ ತಾರೀಖು ಎಲ್ಲಾ ಬಾಕಿಗಳನ್ನೂ ಕೊಟ್ಟುಬಿಡುತ್ತೇವೆ ಎಂದು ಸಹಕಾರಿ ಸಕ್ಕರೆ ಕಾರ್ಖಾನೆ ಪರವಾಗಿ ಒಪ್ಪಿಕೊಂಡು ಹೋಗಿದ್ದಾರೆ. ಆದರೆ, ಇವತ್ತಿನವರೆಗೂ ಬಾಕಿಯನ್ನು ಕ್ಲಿಯರ್ ಮಾಡಿಲ್ಲ. ಜೊತೆಗೆ, ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆಂದು ಕಳೆದು ತಿಂಗಳಿಂದಲೂ ಹೇಳಿಕೊಂಡು ಬರುತ್ತಿದ್ದಾರೆಯೇ ಹೊರತು, ಇವತ್ತಿನವರೆಗೂ ಪ್ರಾರಂಭ ಮಾಡಿಲ್ಲ. ಮೊನ್ನೆ ನಾನು ಕೇಳಿದಾಗ, 10ನೇ ತಾರೀಖು ಪ್ರಾರಂಭ ಮಾಡುತ್ತೇವೆಂದು ನಮ್ಮ ಜೊತೆ ಹೇಳಿದ್ದಾರೆ, ಆದರೆ, ಇಲ್ಲಿ 16ನೇ ತಾರೀಖು ಪ್ರಾರಂಭ ಮಾಡುತ್ತೇವೆಂದು ಉತ್ತರ ಕೊಡುತ್ತಿದ್ದಾರೆ. ಆದ್ದರಿಂದ, ಅವರು ಬಹಳ ಮುಖ್ಯವಾಗಿ ಶೀಘ್ರವಾಗಿ ಪ್ರಾರಂಭ ಮಾಡುತ್ತಾರೋ ಇಲ್ಲವೋ ಎಂಬುದು ಬೇಕಾಗಿದೆ. ಆದರ ಜೊತೆಗೆ, ಅವರು ನಿಲ್ಲಿಸಿ 5 ತಿಂಗಳಾಗಿದೆ. 11 ತಿಂಗಳಿನ ಕಬ್ಬಿಗೆ ಇವತ್ತಿನದಿವಸ ಒಂದು ವರ್ಷದ ಮೇಲೆ 4 ತಿಂಗಳಾಗಿದೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ, ಆದಷ್ಟು ಜಾಗ್ರತೆಯಾಗಿ ಆ ಕಾರ್ಖಾನೆಯನ್ನು ಶುರು ಮಾಡುವುದಕ್ಕೆ ತಾವು ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಹಣಕಾಸಿನ ಸಚಿವರೂ ಕೂಡ ಅವರ ಕಚೇರಿಯಲ್ಲಿ ಕರೆಯಿಸಿ, ಈ ವಿಷಯದ ಬಗ್ಗೆ ಚರ್ಚೆ ಮಾಡಿದ್ದಾರೆ. ಕಾರ್ಖಾನೆಯನ್ನು ತೀವ್ರವಾಗಿ ಪ್ರಾರಂಭ ಮಾಡುತ್ತೇವೆ. ರೈತರಿಗೆ, ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಹಾಗೆ, 109 ಲಕ್ಷ ಬಾಕಿ ಕೊಡುವುದಿದೆ. ಈ ಬಾಕಿಯನ್ನು ಕೊಡುವುದರ ಬಗ್ಗೆಯೂ ಕೂಡ ತೀವ್ರವಾಗಿ ಕಂಪನಿಯವರ ಕಡೆಯಿಂದ ಆ ಬಾಕಿಯನ್ನು ರೈತರಿಗೆ ಕೊಡಿಸುತ್ತೇನೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್.ಕೃಷ್ಣಪ್ಪ:- ನನಗೆ 11-8-95ರಲ್ಲಿ ಕೊಟ್ಟಿದ್ದಾರೆ. ಮೈಸೂರು, ಮಂಡ್ಯ, ಹಾಸನ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಮಾತ್ರ ತಮ್ಮ ಕೆಲಸವನ್ನು ಜೂನ್, ಜುಲೈ ತಿಂಗಳಲ್ಲಿ ಪ್ರಾರಂಭಿಸುತ್ತಾರೆ ಎಂದು ಕೊಟ್ಟಿದ್ದಾರೆ. ಯಾವ ತಿಂಗಳಲ್ಲಿ, ಯಾವ ಯಾವ ಕಾರ್ಖಾನೆ ಪ್ರಾರಂಭ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆ. ಜೂನ್, ಜುಲೈ ತಿಂಗಳಲ್ಲಿ ಪ್ರಾರಂಭ ಮಾಡತಕ್ಕ ಕಾರ್ಖಾನೆಗಳು, ಇವತ್ತು ಸೆಪ್ಟೆಂಬರ್ ಬಂದರೂ ಇನ್ನೂ ಪ್ರಾರಂಭ ಮಾಡಿಲ್ಲ. ಮೈಸೂರು ಷುಗರ್, ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯವರು 710 ರೂಪಾಯಿ ರೇಟನ್ನು ಕೊಡುತ್ತಿದ್ದಾರೆ, 25 ರೂಪಾಯಿ ಸಾಗಾಟಕ್ಕಾಗಿ ಕೊಡುತ್ತಿದ್ದಾರೆ. ಆದರೆ, ಇಲ್ಲಿ ಮಾತ್ರ ಕೇವಲ 560 ರೂಪಾಯಿ ಕೊಡುತ್ತೇವೆ ಎನ್ನತಕ್ಕ ದೃಢ ನಿಲುವನ್ನು ಮಾಡಿದ್ದಾರೆ. ರೈತರು ಬೆಳೆದ ಕಬ್ಬನ್ನು ಒಪ್ಪಿಕೊಂಡು, ಹೇಗಾದರೂ ಕಬ್ಬು ಜಾಸ್ತಿ ಇದೆ, ನಾವು ಇಷ್ಟೇ ಕೊಡುತ್ತೇವೆ ಎಂದು, ಏನೊಂದು ದೃಡತೆಯನ್ನು ತಾಳಿ ಈ ಸಕ್ಕರೆ ಕಾರ್ಖಾನೆಗಳು ಏನು ನಿಂತಿವೆ, ಇದರ ಬಗ್ಗೆ ಸರ್ಕಾರಕ್ಕೆ ಕಳಕಳಿ ಬೇಕು. ಸರ್ಕಾರ ಆಶ್ವಾಸನೆಯನ್ನು ಕೊಡಬೇಕು, ಇವತ್ತು ಬೇರೆ ಕಾರ್ಖಾನೆಗಳವರು 710 ರೂಪಾಯಿ ಕೊಡುತ್ತೇವೆಂದು ಒಪ್ಪಿಕೊಂಡಿವೆ, ಅದೇ ರೇಟನ್ನು ಈ ಕಾರ್ಖಾನೆಯವರು ಕೊಡುವ ಬಗ್ಗೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ಏಕೆಂದರೆ, ಬೇರೆಯವರಿಗೆ ವರ್ಕ್‌ಔಟ್ ಆಗುತ್ತದೆ, ಬೇರೆಯವರಿಗೆ ಅದು ಸೂಕ್ತವಾಗುತ್ತದೆ. ಈ ಸಕ್ಕರೆ ಕಾರ್ಖಾನೆಯವರಿಗೆ ಏಕೆ ಆಗುವುದಿಲ್ಲ. ಕೇವಲ 3-4 ಕೋಟಿ ರೂಪಾಯಿಗಳು ಪಡೆದಿರುವಂಥ ಈ ಸಕ್ಕರೆ ಕಾರ್ಖಾನೆ, ಇವತ್ತು ನಮಗೆ ಷೇರು ಹಣ ಇಲ್ಲ, ಹಳೇ ಬಾಕಿ ಹಣ ಇಲ್ಲ. ನಮ್ಮ ಸಹಕಾರಿ ತತ್ವದ ಮತ್ತು ಹಣವನ್ನು ಸಕಾಲಕ್ಕೆ ಕೊಡುತ್ತಿದ್ದ ಕಾರ್ಖಾನೆಯನ್ನು ಇವತ್ತು ಖಾಸಗಿಯವರಿಗೆ ಕೊಟ್ಟು, ಇವತ್ತು ನಾವು ಆ ಕಾರ್ಖಾನೆಯಿಂದ ಸಂಕಷ್ಟದಲ್ಲಿದ್ದೇವೆ. ಇದರ ಬಗ್ಗೆ ಸರ್ಕಾರ ತೀವ್ರವಾದ ನಿಲುವನ್ನು ತೆಗೆದುಕೊಂಡು, 710 ರೂಪಾಯಿ ಮತ್ತು ಸಾಗಾಟದ ವೆಚ್ಚ 25 ರೂಪಾಯಿಗಳಂತೆಯೇ ಕೊಡಬೇಕು. ಎಲ್ಲಾ ಕಾರ್ಖಾನೆಯವರೂ ಆ ಭಾಗದ ರೈತರಿಗೆ ರಸ್ತೆಯನ್ನು ಮಾಡಿಕೊಳ್ಳಿ ಎಂದು ಹಣ ಕೊಡುತ್ತಾರೆ. ಈ ಕಾರ್ಖಾನೆಯವರು 10 ರೂಪಾಯಿ ಕೊಟ್ಟಿಲ್ಲ. ನಮ್ಮ ಹಣವನ್ನು ಹಿಡಿಯುತ್ತಾರೆ, ಥರ್ಮಲ್‌ಗೆ ಹಣ ಕೊಡುತ್ತಾರೆ, ರಸ್ತೆಗೆ ಹತ್ತು ರೂಪಾಯಿ ಇಲ್ಲ. ಇಂತಹ ಕಾರ್ಖಾನೆ ಬಗ್ಗೆ ತಾವು ತಕ್ಷಣ ಹಣವನ್ನು ಕೊಡಬೇಕು, ಮತ್ತು ತಕ್ಷಣ ಪ್ರಾರಂಭ ಮಾಡಬೇಕು. ಸರ್ಕಾರದ ಇಂದಿನ ಆಶ್ವಾಸನೆ ಬಗ್ಗೆ ನಮಗೆ ನಂಬಿಕೆ ಇಲ್ಲ. ನಂಬಿಕೆ ಪ್ರಕಾರ ಮಾಡಿಲ್ಲವೆನ್ನುವುದನ್ನು ಕಳಕಳಿಯಿಂದ ಹೇಳಿಕೊಳ್ಳುತ್ತಾ, ತಕ್ಷಣ ಪ್ರಾರಂಭ ಮಾಡಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಪಿ.ಸಿ.ಸಿದ್ದನಗೌಡರ್:- ಮಾನ್ಯ ಸದಸ್ಯರು ಹೇಳತಕ್ಕಂಥ ಈ ಸಕ್ಕರೆ ಕಾರ್ಖಾನೆಯವರು ಕೊಡತಕ್ಕ ಬಾಕಿ ಬಗ್ಗೆ ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಎರಡನೆಯದಾಗಿ, ಬೆಲೆ ಕೊಡುವುದರ ಬಗ್ಗೆ, ಸ್ಟೇಟ್ advisory ಪ್ರೈಸ್ ಎಂದು ಸರ್ಕಾರದವರು ಒಂದು ರೇಟನ್ನು

ನಿಗದಿ ಮಾಡಿರುತ್ತೇವೆ. without distillery and with distillery ಎಂದು. ಒಂದು ಟನ್ ಕಬ್ಬಿಗೆ 580 ರೂಪಾಯಿ ಬೆಲೆ ಕೊಡಬೇಕೆಂದು ನಿಗದಿ ಮಾಡಿದ್ದೇವೆ. ಆನೇಕ ಕಡೆ ಏನಾಗಿದೆಯೆಂದರೆ, 800 ರೂಪಾಯಿ ಕೊಡಿ, ಸಾವಿರ ರೂಪಾಯಿ ಕೊಡಿ ಎಂದು ರೈತರು ಹೋಗಿ ಕಾರ್ಖಾನೆಯವರಿಗೆ ಒತ್ತಾಯ ಮಾಡುತ್ತಾರೆ. ಅದು ಆ ಕಾರ್ಖಾನೆಯವರಿಗೆ ಮತ್ತು ಆ ರೈತರಿಗೆ ಬಿಟ್ಟಂಥಾದ್ದು. ನಮ್ಮ ಸರ್ಕಾರದ ಕಾನೂನು ಏನಿದೆ, ಆ ಕಾನೂನು ಪ್ರಕಾರ, ರೇಟ್ ಕೊಡಲಿಕ್ಕೆ ಅವರಿಗೆ ಒತ್ತಾಯ ಮಾಡಿದ್ದೇನೆ. ಇನ್ನೂ ಕೂಡ, ನಾನು ಮಾಡುತ್ತೇನೆ. ಅದು ಬಿಟ್ಟು, ಎಲ್ಲರೂ ತಮ್ಮ ತಮ್ಮ ಏರಿಯಾದಲ್ಲಿ ಸಾವಿರ ಕೊಡು ಎಂಟು ನೂರು ಕೊಡು, ಒಂಭೈನೂರು ಕೊಡು ಎಂದ್ದು ಹೇಳಿದರೆ, ಅದು ಆಗುವುದಿಲ್ಲ. ಇಳುವರಿ ಆಧಾರ ಇಟ್ಟುಕೊಂಡು, ಕೆಲವು ಸರ್ಕಾರದ ಇತಿಮಿತಿಗಳನ್ನು ಹೇಳಬೇಕಾಗುತ್ತದೆ. ಈಗಾಗಲೇ ಹಣಕಾಸಿನ ಮಂತ್ರಿಗಳಿಗೆ ನಾನು ಹೇಳಿದ್ದೇನೆ. ಮಂತ್ರಿಗಳೂ ಕೂಡ ಅವರನ್ನು ಕರೆಯಿಸಿ ಸಲಹೆ ಕೊಟ್ಟಿದ್ದಾರೆ. ಸನ್ಮಾನ್ಯ ಹಣಕಾಸಿನ ಮಂತ್ರಿಗಳೂ ಕೂಡ ಅವರನ್ನು ಕರೆಸಿ, ತೀವ್ರವಾದ ನಿರ್ಣಯವನ್ನು ಮಾಡಿ, ಈ ವಿಷಯದಲ್ಲಿ ಅವರಿಗೆ ಹೇಳುತ್ತಾರೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು:- ನೀವು ಇದಕ್ಕೆ ಸಹಿ ಮಾಡಿಲ್ಲವಲ್ಲ...

ಒಬ್ಬ ಸದಸ್ಯರು:- ರೈತರಿಗೆ ಕಡಿಮೆ ಕೊಟ್ಟರೆ ಹೇಗೆ? ರೈತರಿಗೆ ಬರುವುದು, ಫ್ಯಾಕ್ಟರಿಯವರಿಗೆ ಹೋದರೆ ಹೇಗೆ?

ಒಬ್ಬ ಸದಸ್ಯರು:- ನನ್ನದೊಂದು ವಿನಂತಿ. ಸರ್ಕಾರ ಈ ಬೆಲೆ ಬಗ್ಗೆ ಏನು ನಿಗದಿ ಮಾಡಿರುತ್ತದೆಯೋ ಅದರ ಬಗ್ಗೆ ಹೇಳುತ್ತೇನೆಯೇ ಹೊರತು, ನಾನು ಹೆಚ್ಚಿಗೆ ಹೇಳುವುದಿಲ್ಲ.

ಅಧ್ಯಕ್ಷರು:- ಯಾವ ಸದಸ್ಯರು ನೋಟೀಸ್‌ಗಳಿಗೆ ಸಹಿ ಮಾಡಿರುತ್ತಾರೆ ಪ್ರಶ್ನೆಗಳನ್ನು ಕಳುಹಿಸಿರುತ್ತಾರೆ. ಅವರು ಮಾತ್ರ ಕ್ಲಾರಿಫಿಕೇಶನ್ ಕೇಳಲು ಅವಕಾಶವಿರುತ್ತದೆ. ಬೇರೆಯವರಿಗೆ ಇರುವುದಿಲ್ಲ. ಈಗ ನೀವು 16-9-95 ಕ್ಕೆ ಆ ಕಾರ್ಖಾನೆಯನ್ನು ಪ್ರಾರಂಭ ಮಾಡಿಸುತ್ತೇವೆಂದು ಹೇಳಿದ್ದೀರಿ. ದಯಮಾಡಿ, ಆ ಬಗ್ಗೆ ನಿಮಗೆ ಗಮನವಿರಲಿ. ಇಲ್ಲದೇ ಹೋದರೆ ಪರಿಣಾಮ ಸರಿಹೋಗುವುದಿಲ್ಲ. ಈ ಸದನದಲ್ಲಿ ತಾವು ಖಚಿತವಾಗಿ 16-9-95ಕ್ಕೆ ಪ್ರಾರಂಭವಾಗುತ್ತದೆಂದು ಹೇಳಿದ್ದೀರಿ. ಅದು ಆಗದೇ ಹೋದರೆ, ನೀವು ಸದನಕ್ಕೆ ಕೊಟ್ಟ ಮಾತಿಗೆ ತಪ್ಪಿದಂತಾಗುತ್ತದೆ ಆದ್ದರಿಂದ ನಿಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ದ.ಅ. ನಿಯಮ 351ರ ಮೇರೆಗೆ

1) ವಿಷಯ:- ಹೆಣ್ಣೂರು ಬಾಣಸವಾಡಿ ರಸ್ತೆ ಒಂದನೇ ಬ್ಲಾಕಿನಲ್ಲಿರುವ 10ನೇ ಮುಖ್ಯ ರಸ್ತೆಯಲ್ಲಿ, ಪೈಪು ಜೋಡಿಸಿದ್ದರೂ ಕೂಡ ನೀರು ಕೊಡದಿರುವ ಬಗ್ಗೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೇ, ಬೆಂಗಳೂರಿನ ಹೆಣ್ಣೂರು-ಬಾಣಸವಾಡಿ ರಸ್ತೆ ಒಂದನೇ ಬ್ಲಾಕ್‌ನಲ್ಲಿರುವ 10ನೇ ಮುಖ್ಯ ರಸ್ತೆ ಹಾಗೂ 10ನೇ ಎ, ಬಿ ಮತ್ತು ಇ ರಸ್ತೆಯಲ್ಲಿ ಕಳೆದ 11 ವರ್ಷಗಳಿಂದ ನೀರು ಸರಬರಾಜಿಗೆ ಪೈಪುಗಳನ್ನು ಜೋಡಿಸಲಾಗಿದ್ದರೂ ಕೂಡ ನೀರು ಕೊಟ್ಟಿರುವುದಿಲ್ಲ. ಹಾಗೂ ಈ ಪ್ರದೇಶಗಳಲ್ಲಿ ಮೂಲಭೂತ ಅವಶ್ಯಕತೆಗಳಾದ ಒಳಚರಂಡಿ, ರಸ್ತೆಗಳಿಗೆ ಡಾಂಬರು ಹಾಕುವ ಕೆಲಸಗಳು